**Fax:** 08282-256262
**E-mail:**kuvempuacademic@gmail.com

Phone No - 08282-256149
**Website:**www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

**ಶೈಕ್ಷಣಿಕ ವಿಭಾಗ,** ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ, ಜ್ಞಾನ ಸಹ್ಯಾದ್ರಿ,
ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

---

ಸಂಖ್ಯೆ:ಕುವಿ:ಶೈವಿ:ಎಸಿ–6: 3880 :2021–22

ದಿನಾಂಕ:07–12–2021

## ಸುತ್ತೋಲೆ

**ವಿಷಯ:– ರಾಷ್ಟ್ರೀಯ ಶಿಕ್ಷಣ ನೀತಿ – 2020ರ ಬಗ್ಗೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಂಪ್ಯೂಟರ್ ಆಪರೇಟರ್‌ಗಳಿಗೆ ತರಬೇತಿ ನೀಡುವ ಕುರಿತು.**

* * * * *

ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮಾನ್ಯ ಕುಲಸಚಿವರಿಗೆ ಮಾಡಿದ ದೂರವಾಣಿ ಆದೇಶದನ್ವಯ ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಶಿವಮೊಗ್ಗ / ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಸ್ನಾತಕ ಪದವಿಗಳ ಸಂಯೋಜಿತ/ ಘಟಕ/ ನೇರ ಆಡಳಿತ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಂಪ್ಯೂಟರ್ ಆಪರೇಟರ್‌ಗಳಿಗೆ ರಾಷ್ಟ್ರೀಯ ಶಿಕ್ಷಣ ನೀತಿ – 2020 ಮತ್ತು Digital fluency ಬಗ್ಗೆ ಆನ್‌ಲೈನ್ ಮೂಲಕ ಒಂದು ಗಂಟೆ ತರಬೇತಿ ನೀಡಲಾಗುವುದೆಂದು ತಿಳಿಸಲಾಗಿದೆ. ಪ್ರತಿ ಕಾಲೇಜಿನ ಪ್ರಾಂಶುಪಾಲರು ಇದಕ್ಕಾಗಿ ವಿಶ್ವವಿದ್ಯಾಲಯದ ನೋಡಲ್ ಅಧಿಕಾರಿಗಳನ್ನು ಸಂಪರ್ಕಿಸಿ ತರಬೇತಿಯ ವೆಬ್‌ಲಿಂಕ್ ಹಾಗೂ ದಿನಾಂಕ ಮತ್ತು ಸಮಯ ನಿಗದಿಪಡಿಸಿಕೊಳ್ಳಲು ತಿಳಿಸಲಾಗಿದೆ. **ನೋಡಲ್ ಅಧಿಕಾರಿಗಳ ದೂರವಾಣಿ ಸಂಖ್ಯೆ : 9845142267.**

ಹಾಗೂ **UUCMS Software** ನಲ್ಲಿ **Scholarship upload** ಮಾಡುವುದಕ್ಕೆ 8ನೇ ಡಿಸೆಂಬರ್ 12 ಗಂಟೆಗೆ ಕೊನೆಯ ದಿನಾಂಕ ಆಗಿರುತ್ತದೆ. ಮತ್ತು ಪ್ರಾಂಶುಪಾಲರು ವಿದ್ಯಾರ್ಥಿಗಳ ಶಿಷ್ಯವೇತನ (Scholarship) ವನ್ನು ನಿಗಧಿತ ದಿನಾಂಕದೊಳಗೆ upload ಮಾಡಲು ತಿಳಿಸಲಾಗಿದೆ. ಇದಕ್ಕೆ ತಪ್ಪಿದಲ್ಲಿ ಪ್ರಾಂಶುಪಾಲರನ್ನೆ ಹೊಣೆಗಾರರನ್ನಾಗಿ ಮಾಡಲಾಗುವುದು.

ಕರಡು ಕುಲಸಚಿವರಿಂದ
ಅನುಮೋದನೆಯಾಗಿದೆ.

07/12/21
**ಉಪಕುಲಸಚಿವರು**
ಶೈಕ್ಷಣಿಕ ವಿಭಾಗ,
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ–577451.
ಶಿವಮೊಗ್ಗ ಜಿಲ್ಲೆ.

7/12/2021

**ಗೆ,**

ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಶಿವಮೊಗ್ಗ / ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಸ್ನಾತಕ ಪದವಿಗಳ ಸಂಯೋಜಿತ/ ಘಟಕ/ ನೇರ ಆಡಳಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮುಂದಿನ ಅಗತ್ಯ ಸೂಕ್ತಕ್ರಮಕ್ಕಾಗಿ

**ಪ್ರತಿಗಳು,**

1. ಆಪ್ತ ಸಹಾಯಕರು, ಕುಲಪತಿಗಳು: ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2. ರಕ್ಷಣಾ ಕಡತ.
3. ಕಛೇರಿ ಪ್ರತಿ.